**ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ, ಹುಬ್ಬಳ್ಳಿ.**

**OS: 416/23** **PW-1**

**ಸತ್ಯ ಪ್ರತಿಜ್ಞೆ ಮೇರೆಗೆ ದಿನಾಂಕಃ 08.02.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ವಾದಿ ಪರ ಶ್ರೀ S R Ambli, ವಕೀಲರಿಂದ ಃ**

ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ದಾಖಲಿಸಿದ್ದು ಅದರಲ್ಲಿರುವ ಸಂಗತಿಗಳು ಸತ್ಯ ಹಾಗೂ ಸರಿ ಇರುತ್ತವೆ. ನಾನು ಈ ಕೆಳಕಂಡ ದಾಖಲೆಗಳನ್ನು ಹಾಜರಪಡಿಸಿದ್ದೇನೆ.

ಪ್ರತಿವಾದಿಯ ತಂದೆ ಮತ್ತು ನನ್ನ ಅಜ್ಜನ ನಡುವೆ ಆದ ಭೂ-ಭಾಡಿಗೆ ಕರಾರು ಪತ್ರದ ದೃಢೀಕೃತ ನಕಲನ್ನು ನಿಪಿ.1 ಎಂದು ಗುರುತಿಸಲಾಯಿತು.

ಅದರ ಮುಂದುವರೆದ ಭಾಡಿಗೆ ಕರಾರು ಪತ್ರವನ್ನು ಹಾಜರಪಡಿಸಿದ್ದೇನೆ. (ಅದು ಒಂದು ವರ್ಷಕ್ಕಿಂತ ಹೆಚ್ಚಿನ ಭಾಡಿಗೆ ಕರಾರು ಆದ ಕಾರಣ, ಅದರ ಮೇಲೆ ನಿಗದಿತ ಮುದ್ರಾಂಕ ಶುಲ್ಕ ತುಂಬದ ಕಾರಣ ಅದನ್ನು ಗುರುತಿಸಲು ನಿರಾಕರಿಸಲಾಯಿತು. ಕಲಂ-33 ಮತ್ತು 34 ಮುದ್ರಾಂಕ ಕಾಯ್ದೆ ಅಡಿಯಲ್ಲಿ ಆ ದಾಖಲೆಯನ್ನು ಮುಟ್ಟುಗೋಲು ಹಾಕಿಕೊಳ್ಳಲಾಯಿತು.)

ಎರಡು ಸಿ ಟಿ ಎಸ್ ಉತಾರೆಗಳನ್ನು ಹಾಜರಪಡಿಸಿದ್ದು ಅದನ್ನು ನಿಪಿ.2 ಮತ್ತು ನಿಪಿ.3 ಎಂದು ಗುರುತಿಸಲಾಯಿತು.

ನೋಟಿಸಿನ ಸ್ಥಳ ಪ್ರತಿಯನ್ನು ನಿಪಿ.4 ಎಂದು ಗುರುತಿಸಲಾಯಿತು.

ಅಂಚೆ ಸ್ವೀಕೃತಿ ಪತ್ರವನ್ನು ನಿಪಿ.4-(ಎ) ಎಂದು ಗುರುತಿಸಲಾಯಿತು.

ದಾವಾ ಆಸ್ತಿಯ ಮೂರು ಭಾವಚಿತ್ರಗಳನ್ನು ಮತ್ತು ಅವುಗಳ ಸಿ ಡಿ ಯನ್ನು ಹಾಜರಪಡಿಸಿದ್ದು ಅವುಗಳನ್ನುಕ್ರಮವಾಗಿ ನಿಪಿ.5 ರಿಂದ ನಿಪಿ.9 ಎಂದು ಗುರುತಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆಗೆ ಸಮಯ ಕೋರಿದರು, ಸಮಯ ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೆ.ಸ.ಎ. ಒಪ್ಪಿಕೊಳ್ಳಲಾಯಿತು.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ಹಾಗೂ ಜೆ.ಎಂ.ಎಫ್.ಸಿ. ಹುಬ್ಬಳ್ಳಿ.